ಸಿ.ಸಿ..ನಂ.36-24

ಪಿ.ಡಬ್ಲ್ಯೂ-1

ದಿನಾಂಕ: 25-03-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿ ಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ ವಿ.ಎಸ್ ಎನ್ ವಕೀಲರಿಂದಃ**

1. ನಾನು ಪಿರ್ಯಾದೆದಾರರ ಸಂಸ್ಥೆ ಯಲ್ಲಿ ಸದಸ್ಯನಾಗಿ 6 ವರ್ಷವಾಯಿತು . ಪಿರ್ಯಾದೆದಾರರ ಸಂಸ್ಥೆಯಲ್ಲಿ 13 ಜನ ಬೊರ್ಡ ಅಫ್ ಡೈರೆಕ್ಟರ ಇರುತ್ತಾರೆ . ಪಿರ್ಯಾದೆದಾರರ ಸಂಸ್ಥೆ ಎಂದು ಹೇಳುವ ಸಂಸ್ದೆಯು ಒಂದೇ ಸಂಸ್ದೆ.ಯಗಿರುತ್ತದೆ ಅದಕ್ಕೆ ಶಾಖೆಗಳು ಇಲ್ಲ . ನಿಪಿ-7 ರ ಮೇಲೆ ನಿಮ್ಮ ಸಂಸ್ದೆಯ ಎಲ್ಲಾ ಬೊರ್ಡ ಅಫ್ ಡೈರೆಕ್ಟರ ಗಳು ಸಹಿ ಹಾಕಿದ್ದು ಇಲ್ಲ ಎಂದರೆ ಸರಿ . ಆದರೆ ಮೂಲ ಪ್ರತಿಯಲ್ಲಿ ಎಲ್ಲರ ಸಹಿಗಳು ಇರುತ್ತದೆ . ಅದರ ಮೂಲ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರ ಪಡಿಸಿದ್ದು ಇಲ್ಲ ಎಂದರೆ ನನಗೆ ನೆನಪಿಗೆ ಬರುತ್ತಿಲ್ಲ ಆ ರೀತಿ ದಾಖಲಾತಿ ಇಲ್ಲ ಆ ಕಾರಣದಿಂದ ನೀವು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ . ಈ ದಾಖಾಲತಿ ನೀವು ಸೃಷ್ಟಿಪಡಿಸಿ ನ್ಯಾಯಾಲಯಕ್ಕೆ ಹಾಜರ ಪಡಿಸಿದ್ದು ಎಂದರೆ ಸರಿಯಲ್ಲ . ನಿಮಗೆ ಬೊರ್ಡ ಅಫ್ ಡೈರಕ್ಟರ ಈ ಪ್ರಕರಣ ನಡೆಸಲು ಅಧಿಕಾರ ಕೊಟ್ಟದ್ದು ಇಲ್ಲ ಎಂದರೆ ಸರಿಯಲ್ಲ .2019 ನೇ ಸಾಲಿನಲ್ಲಿ ಸ್ದ್ರಿ ಪಿರ್ಯಾದೆದಾರರ ಸಂಸ್ಥೆಯಲ್ಲಿ ಇರಲಿಲ್ಲ . ಹಾಗಾಗಿ ಅವರು ಏನು ಮಾಡಿರುತ್ತಾರೆ ಎಂದು ನಿಮಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ನಾನು ಹಳೆಯ ದಾಖಲಾತಿ ಪ್ರಕಾರ ನ್ಯಾಯಾಲಯದಲ್ಲಿ ಅದನ್ನು ಮುಂದುವರೆಸಿರುತ್ತೇನೆ . ಸ್ದ್ರಿ ಆರೋಪಿಯು ಯಾವ ದಿನಾಂಕದಂದು ನಿಮ್ಮ ಸಂಸ್ಥೆಗೆ ಬಂದು ಸಾಲದ ಅರ್ಜಿ ಸಲ್ಲಿಸಿದ ಎಂಬ ಗ್ಗೆ ನಿಮಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಹಿಂದಿನ ಅಧಿಕಾರಿಗಳು ದಾಖಾಲತಿ ಇಟ್ಟಿರುತ್ತಾರೆ ಅದರ ಪ್ರಕಾರ ಕೇಸನ್ನು ಮುಂದುವರೆಸಲಾಗುತ್ತದೆ . ನೀವು ಸುಳ್ಳು ಹೇಳುತ್ತಿದ್ದೀರಿ ನೀಮಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸುಳ್ಳು .

2. 2019 ನೇ ಸಾಲಿನಲ್ಲಿ ನಿಮ್ಮ ಸಂಸ್ದೆ.ಯನ್ನು ಗೋವಿಂದ ಬೊಮ್ಮಯ್ಯ ಗಾಂವಕಾರ ರವರು ಪ್ರತಿನಿಧಿಸುತ್ತಿದ್ದರು . ನಿಮ್ಮ ಬೊರ್ಡ ಅಫ್ ಡೈರೆಕ್ಟರರವರು ಠರಾವು ಪಾಸು ಮಾಡಿ ಸಾಲ ಮಂಜೂರು ಮಾಡಿದ್ದೇವೆ ಎಂದು ಹೇಳುವಂತಹ ದಾಖಲಾತಿ ನ್ಯಾಯಾಲಯಕ್ಕೆ ಹಾಜರ ಪಡಿಸಿದ್ದೀರಾ ಎಂದರೆ ಹಾಜರ

ಪಡಿಸಿದ್ದೇವೆ ಆ ರೀತಿಯಾದಂತಹ ಯಾವುದೆ ದಾಖಲಾತಿ ನ್ಯಾಯಾಲಯಕ್ಕೆ ಹಾಜರ ಪಡಿಸಿಲ್ಲ ಎಂದರೆ ಸರಿಯಲ್ಲ . ಸಾಕ್ಷಿಗೆ ದಾಖಲಾತಿ ಕೊಟ್ಟು ಯಾವ ದಾಖಲಾತಿ ಎಂದು ತೋರಿಸಿ ಎಂದು ಹೇಳಿದಾಗ ಸಾಕ್ಷಿ ದಾಖಲಾತಿ ನೋಡಿ ಹಾಜರ ಪಡಿಸಿಲ್ಲ ಎಂದು ನುಡಿಯುತ್ತಾರೆ . ಅಂತಹ ದಾಖಾಲತಿಯನ್ನು ನ್ಯಾಯಾಲಯಕ್ಕೆ ಹಾಜರ ಪಡಿಸಲು ನಿಮಗೆ ತೊಂದರೆ ಇಲ್ಲ ಎಂದರೆ ಸರಿ .

3. ಆರೋಪಿಯು ನಮ್ಮ ಸಂಸ್ಥೆಯಲ್ಲಿ ನೋಮಿನಲ್ ಸದಸ್ಯನಾಗಿದ್ದ . ಅವರು ಸಾಲ ನೀಡುವಂತಹ ಸಮಯದಲ್ಲಿ ನಮ್ಮ ಸಂಸ್ದೆ.ಯ ನೋಮಿನಲ್ ಸದಸ್ಯನಾಗಿದ್ದ . ಆತನು ಎಷ್ಟು ವರ್ಷ ಪ್ರಕಾರ ನೋಮಿನಲ್ ಸದಸ್ಯನಾಗಿದ್ದ ಎಂದರೆ ಅದನ್ನು ಕಂಟಿನ್ಯೂ ಆಗಿ ಇಟ್ಟು ಕೊಂಡಿರುತ್ತೇವೆ ಅದನ್ನು stop ಮಾಡಲು ಆಗುವುದಿಲ್ಲ . ನೋಮಿನಲ್ ಮೆಂಬರ ಆದವರು ನಿಮ್ಮ ಸಂಸ್ದೆಯಲ್ಲಿ ಎಷ್ಟು ವರ್ಷಗಳ ನಂತರ ಪರ್ಮನೆಂಟ ಮೆಂಬರ ಆಗುತ್ತಾರೆ ಎಂದರೆ ಆ ರೀತಿ ಇಲ್ಲ . ನೋಮಿನಲಿ ಮೆಂಬರ ಆದವರಿಗೆ ಸಾಲ ಮಂಜೂರು ಮಾಡಬಹುದು ಎಂದುಬೈಲಾದಲ್ಲಿ ಇರುವ ಬಗ್ಗೆ ಬೈಲಾ ಹಾಜರ ಪಡಿಸಿದ್ದೀರಾ ಎಂದರೆ ಇಲ್ಲ . ನೋಮಿನಲ್ ಮೆಂಬರ ಆದವರಿಗೆ ಸಾಲ ಮಂಜೂರು ಮಾಡಲು ಬರುವುದಿಲ್ಲ ಎಂದರೆ ಸುಳ್ಳು . ಬೈಲಾದಲ್ಲಿ ಅವಕಾಶ ಇದ್ದುದಕ್ಕೆ ನೋಮಿನಲ್ ಮೆಂಬರ ಅದವರಿಗೆ ಸಾಲ ಮಂಜೂರು ಮಾಡುತ್ತೇವೆ . ಆರೋಪಿಯು ನೊಮಿನಲ್ ಮೆಂಬರ ಶಿಪ ದ ಅರ್ಜಿಯನ್ನು ಸಲ್ಲಿಸಿದ ಬಗ್ಗೆ ನಿಮಗೆ ಗೊತ್ತಾ ಎಂದರೆ ನೆನಪಿಗೆ ಬರುತ್ತಿಲ್ಲ . ನೋಮಿನಲ್ ಅರ್ಜಿಯನ್ನು ಸಲ್ಲಿಸಿದ ಎಷ್ಟು ದಿನದ ಬಳಿಕ ಅವರನ್ನು ನೊಮಿನಲ್ ಮೆಂಬರ ಎಂದು ಘೋಷಣೆ ಮಾಡುತ್ತೀರಿ ಎಂದರೆ ನೋಮಿನಲ್ ಮೆಂಬರ ಶಿಪ್ ನ ಪಾವತಿಯಾದ ದಿನದಿಂದಲೇ ಅವರು ನಮ್ಮ ಸಂಸ್ಥೆಯ ನೋಮಿನಲ ಮೆಂಬರ ಅಗುತ್ತಾರೆ . ಸದ್ರಿ ನೋಮಿನಲ್ ಮೆಂಬರ ಶಿಪ್ ಪಾವತಿಯನ್ನು ನ್ಯಾಯಾಲಯಕ್ಕೆ ಹಾಜರಪಡಿಸಬಹುದಾ ಎಂದರೆ ಸರಿ . ನೋವಿಜನಲ್ ಮೆಂಬರ ಶಿಪ್ ನ್ನು ಪಡೆದುಕೊಂಡ ದಿನವೆ ಆ ದಿನವೆ ಶೇರನ್ನು ಆರೋಪಿಯು ಪಡೆದುಕೊಂಡಿರುತ್ತಾನಾ ಎಂದರೆ ನನಗೆ ನೆನಪಿಗೆ ಬರುತ್ತಿಲ್ಲ .

3.ಆರೋಪಿಯು ಶೇ 5 ರಂತೆ ನಮ್ಮ ಪ್ರಕಾರ ಶೇರನ್ನು ಪಡೆದುಕೊಂಡಿರುತ್ತಾನೆ ಆ ಶೇರು ದಾಖಲಾತಿ ನ್ಯಾಯಾಲಯಕ್ಕೆ ಹಾಜರ ಪಡಿಸಿಲ್ಲ ಅದನ್ನು ಹಾಜರ ಪಡಿಸುತ್ತೇನೆ . ಸದ್ರಿ ಶೇರನ್ನು ಸಾಲದ ಮಂಜೂರು ಆದ

ಬಳಿಕ ಪಡೆದುಕೊಳ್ಳಲಾಗುತ್ತದ ಅದಕ್ಕಿಂತ ಮೊದಲು ಪಡೆದುಕೊಳ್ಳುವುದಿಲ್ಲ . ನೋಮಿನಲ್ ಮೆಂಬರಗೆ ಶೇರನ್ನು ಪಡೆದುಕೊಳ್ಳಲು ಬರುವುದಿಲ್ಲ ಎಂದರೆ ಸರಿಯಲ್ಲ . ನಿಮ್ಮ ಪ್ರಕಾರ ಅಥವಾ ಬೈಲಾ ಪ್ರಕಾರ ಶೇರನ್ನು ನೋಮಿನಲ್ ಮೆಂಬರ ಪಡೆದುಕೊಳ್ಳಲು ಬರುವುದಿಲ್ಲ ಎಂದು ಯಾವ ಆಧಾರದ ಮೇಲೆ ಹೇಳುತ್ತೀರಿ ಎಂದರೆ ಸಾಲ ಮಂಜೂರಾದ ನಂತರ ಶೇ 5 ರಂತೆ ಶೇರ ಹಣವನ್ನು ಪಡೆದುಕೊಳ್ಳುವ ಅಧಿಕಾರ ನನಗೆ ಇರುತ್ತದೆ . ಸದ್ರಿ ಆರೋಪಿಯು ಇವತ್ತಿನವರೆಗೂ ನೋಮಿನಲ್ ಮೆಂಬರ ಆಗಿರುತ್ತಾರೆ .

( ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು , ಕಾಲಾವಕಾಶ ನೀಡಲಾಯಿತು .)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.